**ಪ್ರಮಾಣವಚನ ಬೋಧಿಸಿದ ದಿನಾಂಕ 09.06.2026**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಅರ್ಜಿದಾರರ ಸಾಕ್ಷಿದಾರರು ಹಾಜರಿರುತ್ತಾರೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಅದರಲ್ಲಿ ತಿಳಿಸಿದ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದ್ದು ನನ್ನ ಹೇಳಿಕೆಯ ಮೇರೆಗೆ ದಾಖಲಿಸಲಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ ಪಿ.ಡಬ್ಲೂ-2 ಎಂದು ವಿಚಾರಿಸಲಾಯಿತು.

ಅಂಗನ್ಯೂನ್ಯತೆ ಪ್ರಮಾಣ ಪತ್ರ ನಿಪಿ 25 ಎಂದು, ಸಾಕ್ಷಿಯ ಸಹಿಯನ್ನು ನಿಪಿ 25 ಎ ಎಂದು, ಎಕ್ಸರೆ ಗಳನ್ನು ಒಟ್ಟಾಗಿ ನಿಪಿ 26 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ

ನಾನು ಪಿಸಿಶಿಯನ್ ಆಗಿರುವುದರಿಂದ ಮೂಳೆಗೆ ಸಂಬಂಧಪಟ್ಟಂತೆ ಅಂಗನ್ಯೂನ್ಯತೆ ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿಯವರು ಯಾವ ದಿನಾಂಕ, ಸಮಯದಂದು ನಮ್ಮ ಆಸ್ಪತೆಗೆ ಬಂದಿರುತ್ತಾರೆ ಎಂಬ ಆಸ್ಪತ್ರೆಯಲ್ಲಿ ಲೆಡ್ಜರ್ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಅಂಗನ್ಯೂನ್ಯತೆ ಬಗ್ಗೆ ವಿವರವಾದ ನೋಟ್ಸ್ ಹಾಜರುಪಡಿಸಿಲ್ಲ ಎಂದರೆ ಸರಿ. ಮುಂದುವರಿದು ನನ್ನ ಪ್ರಮಾಣಪತ್ರದಲ್ಲಿ ತಿಳಿಸಿರುತ್ತೇನೆ. ಅರ್ಜಿದಾರ ಮೊದಲೇ ಹೊಸಮತ್ ಆಸ್ಪತ್ರೆಯಿಂದ ಎಕ್ಸರೆ ಮಾಡಿಕೊಂಡು ಫಿಲಂ ತಂದು ತೋರಿಸಿದ್ದರು. ಸದರಿ ಎಕ್ಸರೆ ಫೆಬ್ರುವರಿ **2023** ರಂದು ಮಾಡಿಸಿದ್ದರು. ನಿಪಿ 26 ಎಕ್ಸರೆ ಕವರ್ ಮೇಲೆ ದಿನಾಂಕ **11.03.2026** ರಂದು ಎಂದು ನಮೂದು ಆಗಿರುತ್ತದೆ ಎಂದರೆ ಬೇರೆ ಬೇರೆ ದಿನಾಂಕದ ಎಕ್ಸರೇ ಗಳು ಇರುತ್ತವೆ. ದಿನಾಂಕ **11.03.2026** ರ **2** ಎಕ್ಸರೆಗಳನ್ನು ನಾನು ನೋಡಿಲ್ಲ. ಮಾರ್ಚ್ 2023

ಕ್ಕಿಂತ ಹಿಂದಿನ ಎಕ್ಸರೆಗಳನ್ನು ನೋಡಿ ಅಂಗನ್ಯೂನ್ಯತೆ ನಿರ್ಧರಿಸಿರುತ್ತೇನೆ. ಮೂಲ ಎಕ್ಸರೆಗಳನ್ನು ನನಗೆ ತಂದುಕೊಟ್ಟಿದ್ದರು. ಗಾಯಾಳು ಯಾವುದೇ ಮೂಲ ಎಕ್ಸರೆಗಳನ್ನು ನನಗೆ ತಂದುಕೊಟ್ಟಿರಲ್ಲಿಲ್ಲ ಋರಾಕ್ಸಗಳನ್ನು ನೋಡಿ ಸುಳ್ಳು ಪ್ರಮಾಣ ಪತ್ರ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಅಂಗನ್ಯೂನ್ಯತೆಯನ್ನು ನಿರ್ಧರಣೆ ಮಾಡಿದ ಬಗ್ಗೆ ವರ್ಕಶೀಟ್ ಹಾಜರುಪಡಿಸಿಲ್ಲ ಎಂದರೆ ಸರಿ.ಅರ್ಜಿದಾರ ಈಗಲೂ ಕೂಡ ಕೆಲಸ ಮಾಡಿಕೊಂಡಿರುವುದರಿಂದ ಸದರಿಯವರಿಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.